ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ 100/2024**

ಪ್ರ.ವ.ಬೋ.ತಾಃ 04-12-2025

ಚಾಸಾಃ 3 ಪ್ರಾಸಾಃ 3

| | |
|---|---|
| ಸಾಕ್ಷಿಯ ಹೆಸರು | ಸಂಜೀವರಾಯಪ್ಪ |
| ತಂದೆ/ಗಂಡನ ಹೆಸರು | ನರಸಿಂಹಪ್ಪ |
| ವಯಸ್ಸು | 60 ವರ್ಷ |
| ವೃತ್ತಿ | ವ್ಯವಸಾಯ |
| ವಾಸ | ಗುಟ್ಟೆ, ಮಧುಗಿರಿ ತಾ. |

**(ಸಾಕ್ಷಿಗೆ ಕನ್ನಡ ಭಾಷೆ ಬಾರದೇ ಇರುವ ಕಾರಣ ಭಾಷಾಂತರಕರಾಗಿ ಶ್ರೀ. ಎಂ.ಹೆಚ್.ಆರ್. ವಕೀಲರ ಮೂಲಕ ಸಾಕ್ಷಿಯ ವಿಚಾರಣೆ ಮಾಡಲಾಯಿತು.)**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ನನಗೆ ಆರೋಪಿತರು ಗೊತ್ತು. ಚಾಸಾ.1 ಮತ್ತು 2 ರವರು ಗೊತ್ತು. ನಾನು ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಕಳೆದ ಒಂದೂವರೆ ವರ್ಷದ ಹಿಂದೆ ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಆರೋಪಿತರು ಮತ್ತು ಚಾಸಾ.1 ರವರ ನಡುವೆ ನಿವೇಶನದ ವಿಚಾರವಾಗಿ ಗಲಾಟೆ ಆಗಿತ್ತು. ಆ ಸಮಯದಲ್ಲಿ 2 ನೇ ಆರೋಪಿ ಚಾಸಾ.1 ರವರಿಗೆ ಹಲ್ಲೆ ಮಾಡಿದರು. ನಂತರ ಆ ಗಲಾಟೆಯನ್ನು ಬಿಡಿಸಿದೆನು.

(ಈ ಹಂತದಲ್ಲಿ ಮಾನ್ಯ ಸಸಅ ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ</u>– ಮಾನ್ಯ ಸ.ಸ.ಅ. ರವರಿಂದಃ–**

ಚಾಸಾ.1 ರವರಿಗೆ ಸಂಬಂಧಿಸಿದಂತೆ ಖಾತಾ ನಂ.74/32 ರಲ್ಲಿ 30 x 40 ನಿವೇಶನ ಇದೆ ಎಂದರೆ ಸರಿ. ಆ ನಿವೇಶನವನ್ನು ಆರೋಪಿತರು ಒತ್ತುವರಿ ಮಾಡಿ ಮನೆ ಕಟ್ಟುತ್ತಿದ್ದು, ಆ ಸಮಯದಲ್ಲಿ ದಿಃ 14.03.2024 ರಂದು ಆರೋಪಿತರು ಚಾಸಾ.1 ರವರ ನಿವೇಶನಕ್ಕೆ ಅತಿಕ್ರಮ ಪ್ರವೇಶ ಮಾಡಿ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ. ಆ ಸಮಯದಲ್ಲಿ 1 ನೇ ಆರೋಪಿ ಚಾಸಾ.1 ರವರಗೆ ಕೈಯಿಂದ ಎದೆಗೆ ಹೊಡೆದರು ಎಂದರೆ ಸರಿ. ಅಲ್ಲದೇ ಜೀವ ಬೆದರಿಕೆ ಹಾಕಿದರು ಎಂದರೆ ಸರಿ. ಈ ಸಂಬಂಧವಾಗಿ ಪೊಲೀಸರು ನನ್ನ ಹೇಳಿಕೆ ಪಡೆದರು ಎಂದರೆ ಸರಿ.

**<u>ಪಾಟೀ ಸವಾಲುಃ</u>– ಆರೋಪಿತರ ಪರವಾಗಿ ಶ್ರೀ. ಎಸ್.ಆರ್.ಆರ್. ವಕೀಲರಿಂದಃ–**

ಚಾಸಾ.1 ನನ್ನ ಸಂಬಂಧಿಕರಲ್ಲ. ಚಾಸಾ.1 ನಮ್ಮ ಮಾವನ ಮಗ ಎಂದರೆ ಸರಿಯಲ್ಲ. ನಮ್ಮ ಮನೆಯಿಂದ ಆರೋಪಿತರ ಮನೆ 16 ಫಾರ್ ಲಾಂಗ್ ದೂರದಲ್ಲಿದೆ. ಆ ಸಮಯದಲ್ಲಿ ಸುಮಾರು 20 ಜನ ಆ ಸ್ಥಳದಲ್ಲಿ ಇದ್ದರು. ಅವರುಗಳ ಹೆಸರು ನನಗೆ ಹೇಳಲು ಬರುವುದಿಲ್ಲ. ಆ ಗಲಾಟೆಯ ಸಮಯದಲ್ಲಿ ನಾನು ಆ ಸ್ಥಳಕ್ಕೆ ಹೋದೆನು. ಆ ಸಮಯದಲ್ಲಿ ಯಾರು ಯಾರನ್ನು ತಳ್ಳಾಡಿದರು ಎಂಬುದನ್ನು ನಾನು ನೋಡಿರುವುದಿಲ್ಲ. ನಾನು ಸ್ಥಳಕ್ಕೆ ಹೋದಾಗ 2 ನೇ ಆರೋಪಿ ಚಾಸಾ.1 ರವರಿಗೆ ಬೈಯುತ್ತಿದ್ದರು. ಚಾಸಾ.1 ರವರು ಅಳುತ್ತಿರುವುದನ್ನು ನಾನು ನೋಡಿ ಹಲ್ಲೆ ಮಾಡಿದರು ಎಂದು ಹೇಳ್ತುದ್ದೇನೆ ಎಂದರೆ ಸರಿಯಲ್ಲ. ಆ ದಿನ ಆರೋಪಿತರು ಚಾಸಾ.1 ರವರನ್ನು ಅವಾಚ್ಯ ಶಬ್ದಗಳಿಂದ ಬೈದು, ಜೀವ ಬೆದರಿಕೆ ಹಾಕಿ ನೂಕಾಡುವುದನ್ನು ನಾನು ನೋಡಿಲ್ಲ ಎಂದರೆ ಸರಿಯಲ್ಲ. ಗಲಾಟೆ ಆದ ಎರಡು ದಿನಗಳ ನಂತರ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡರು. ನಾನು ಚಾಸಾ.1 ರವರ ಮನೆಯ ಹತ್ತಿರ ಹೇಳಿಕೆ ನೀಡಿರುತ್ತೇನೆ. ಆ ಸಮಯದಲ್ಲಿ ಸುಮಾರು 15 ರಿಂದ 20 ಜನ ಆ ಸ್ಥಳದಲ್ಲಿ ಇದ್ದರು. ಆರೋಪಿತರು ಮತ್ತು

ಚಾಸಾ.1ರವರ ಮನೆ ಊರಿನ ಮಧ್ಯಭಾಗದಲ್ಲಿದೆ. ಆ ಮನೆಯ ಸುತ್ತಲೂ ಸಹ ಅಕ್ಕ ಪಕ್ಕದ ಮನೆಗಳು ಇವೆ. ನಾನು ಹೇಳಿಕೆ ನೀಡುವ ಸಮಯದಲ್ಲಿ ಅಕ್ಕ ಪಕ್ಕದ ಮನೆಯವರು ಇದ್ದರೋ ಅಥವಾ ಇಲ್ಲವೋ ಎಂಬುದನ್ನು ನಾನು ನೋಡಿಲ್ಲ. ಆ ಸ್ಥಳದ ಅಕ್ಕ ಪಕ್ಕದ ಮನೆಯವರು ಗಲಾಟೆಯ ಸಮಯದಲ್ಲಿ ಆ ಸ್ಥಳದಲ್ಲಿ ಇದ್ದರು. ಆರೋಪಿತರು ಮತ್ತು ಚಾಸಾ.1ರವರ ಮನೆಯ ಹತ್ತಿರಕ್ಕೆ ಹೋಗುವ ಅವಶ್ಯಕತೆ ನನಗೆ ಇರಲಿಲ್ಲ ಎಂದರೆ, ಸಾಕ್ಷಿಯು ನಾನು ಶಾಲೆಯ ಹತ್ತಿರ ಇದ್ದಾಗ ಗಲಾಟೆ ವಿಚಾರ ಗೊತ್ತಾಯಿತು ಎಂದು ಸ್ವತಃ ನುಡಿಯುತ್ತಾರೆ. ಗಲಾಟೆ ಆದ ಜಾಗ ನಾನು ಇದ್ದ ಸ್ಥಳದಿಂದ 100 ಮೀಟರ್ ದೂರದಲ್ಲಿತ್ತು. ಈ ಬಗ್ಗೆ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರು ಚಾಸಾ.1ರವರ ನಿವೇಶವನ್ನು ಒತ್ತುವರಿ ಮಾಡಿರುವ ಸಂಬಂಧ ನ್ಯಾಯಾಲಯ ತಡೆಯಾಜ್ಞೆ ನೀಡಿರುವ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ನಾನು ಚಾಸಾ.1ರವರ ಮಾವನ ಮಗನಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ

**ಅನುವಾದಕರ ಸಹಿ**